**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>**

**<u>ಸಿ.ಸಿ.ನಂ.31/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | ಹೊನ್ನಪ್ಪ ಬಸಾಪುರ | ಸಿಡಬ್ಲ್ಯೂ 3 |
| ತಂದೆ ಹೆಸರು | ಬಸವಣ್ಣೆಪ್ಪ | ಪಿಡಬ್ಲ್ಯೂ 3 |
| ವಯಸ್ಸು | 56 ವರ್ಷ | |
| ಉದ್ಯೋಗ | ಕೃಷಿ | |
| ವಾಸಸ್ಥಳ | ದೇವಗಿರಿ ತಾಃ ಹಾವೇರಿ | |

**<u>ದಿಃ 04.06.2025 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.</u>**

**1).** ಸಾಕ್ಷಿಗೆ ನಿ.ಪಿ-2 ದಾಖಲಾತಿಯನ್ನು ತೋರಿಸಿ, ಅದರಲ್ಲಿನ ಸಹಿಯನ್ನು ಸಾಕ್ಷಿಯು ತನ್ನದೇ ಇರುತ್ತದೆ ಎಂದು ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ-2(ಸಿ) ಎಂದು ಗುರುತಿಸಲಾಯಿತು. ಅದೇ ರೀತಿ ನನ್ನ ಸಮಕ್ಷಮ ಪ್ರಾಸಾ.-3 ಚನ್ನಪ್ಪ ಸಹಿ ಮಾಡಿರುತ್ತೇನೆ. ಆತನ ಸಹಿಯನ್ನು ಈಗಾಗಲೇ ನಿ.ಪಿ-2(ಬಿ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಗೆ ಘಟನಾನಿ.ಪಿ-2 ಮತ್ತು 3 ದಾಖಲಾತಿಗಳನ್ನು ನೋಡುತ್ತಿದ್ದು, ಸ್ಥಳದ ನಿ.ಪಿ-3 ಘಟನಾ ಸ್ಥಳದ ಕಚ್ಚಾ ನಕಾಶೆ ಆಗಿದ್ದು, ಅದರಲ್ಲಿ ಸಾಕ್ಷಿದಾರರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ, ಸದರಿ ಸಾಕ್ಷಿದಾರರ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು 2022 ರಲ್ಲಿ ಹಾವೇರಿಯ ತಹಶೀಲ್ದಾರ ಕಛೇರಿಯಲ್ಲಿ ಮಾಡಿರುತ್ತೇನೆ. ಪೊಲೀಸರು ನಾನು ಮತ್ತು ಪ್ರಾಸಾ-3 ಚನ್ನಪ್ಪ ಇಬ್ಬರೂ ಸೇರಿಯೇ ಹಾವೇರಿಯ ತಹಶೀಲ್ದಾರ ಕಛೇರಿಗೆ ಕೆಲಸಕ್ಕಾಗಿ ಬಂದಾಗ ಪೊಲೀಸರು ನನ್ನನ್ನೂ ಸಹ ಘಟನೆಯ ಕುರಿತು ವಿಚಾರಣೆ ಮಾಡಿ, ಘಟನಾ ಸ್ಥಳದ ಪಂಚನಾಮೆ ಮೇಲೆ ಮತ್ತು ಕಚ್ಚಾ ನಕಾಶೆಯ ಮೇಲೆ ಇಬ್ಬರ ಸಹಿ ಪಡೆದಿರುತ್ತಾರೆ.

**2)** ಪೊಲೀಸರು ನನ್ನನ್ನು ಮತ್ತು ಚೆನ್ನಪ್ಪನನ್ನು ಕರೆದಾಗ ನಾವು ಇಬ್ಬರೂ ಘಟನಾ ಸ್ಥಳದ ಪಂಚನಾಮೆಗೆ ಮತ್ತು ಕಚ್ಚಾ ನಕಾಶೆಗೆ ನಮ್ಮ ಸಹಿಗಳನ್ನು ಮಾಡಿರುತ್ತೇವೆ. ಆ ಸಮಯದಲ್ಲಿ ಚಾ.ಸಾ-1 ಶಿವಲಿಂಗಪ್ಪ ಸಹ ಹಾಜರಿದ್ದನು ಮತ್ತು ಆತನೂ ಸಹ ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತಾನೆ. ಸದರಿ ಘಟನಾ

ಸ್ಥಳದ ಪಂಚನಾಮೆಯನ್ನು ಮತ್ತು ಕಚ್ಚಾ ನಕಾಶೆಯನ್ನು ಪೊಲೀಸರು ಬೆಳಗಿನ 11-00 ಘಂಟೆಯಿಂದ 11-45 ಘಂಟೆಯವರೆಗೆ ಮಾಡಿರುತ್ತಾರೆ. ಅದೇ ರೀತಿ ಸಾಕ್ಷಿಗೆ ನಿ.ಪಿ-4 ಪೋಟೋ ತೋರಿಸಲಾಗಿ ಸದರಿ ಪೋಟೋ ಪೋಲಿಸರು ನಮ್ಮ ಸಮಕ್ಷಮ ತೆಗೆದಿರುತ್ತಾರೆ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ ಶ್ರೀ.ಎಂ.ಸಿ.ಹೆಚ್ ವಕೀಲರಿಂದಃ ಆರೋಪಿತರ ಪರವಾಗಿಃ**

**3)** ಚಾ.ಸಾ-1 ಶಿವಲಿಂಗಪ್ಪ ಮತ್ತು ಚಾ.ಸಾ-2 ಚೆನ್ನಪ್ಪ ಇಬ್ಬರೂ ಒಬ್ಬರಿಗೊಬ್ಬರು ಸಂಬಂಧಿಕರಾಗಬೇಕು ಅಂದರೆ ಸರಿ. ನನಗೆ ಚೆನ್ನಪ್ಪ ಇತನೂ ನಾನು ಪೊಲೀಸ ಠಾಣೆಯಲ್ಲಿ ಸಹಿ ಮಾಡಲು ಹೋದಾಗ ಮಾತ್ರ ಪರಿಚಯ ಇರುತ್ತಾನೆ ಅಂದರೆ ಸರಿಯಲ್ಲ, ಆತ ನನಗೆ ಮೊದಲಿನಿಂದಲೂ ಪರಿಚಯ ಇರುತ್ತಾನೆ. ನಾನು ನನ್ನ ಕೃಷಿ ಜಮೀನಿನ ಕೆಲಸಕ್ಕಾಗಿ ಹಾವೇರಿಯ ತಹಶೀಲ್ದಾರ ಕಛೇರಿಗೆ ದೇವಗಿರಿ ಗ್ರಾಮದಿಂದ ಹೋದಾಗ ಪೊಲೀಸರು ನನ್ನನ್ನು ಕರೆದಿರುತ್ತಾರೆ. ಆದರೆ ಪೊಲೀಸರು ನನ್ನನ್ನು ಕರೆಯುವಾಗ ಚಾ.ಸಾ-2 ಚೆನ್ನಪ್ಪ ಆತನನ್ನೂ ಸಹ ಕರೆದಿರುವದಿಲ್ಲ. ಪೊಲೀಸರು ನನ್ನನ್ನು ಮತ್ತು ಚಾ.ಸಾ-2 ಚೆನ್ನಪ್ಪ ಇಬ್ಬರನ್ನೂ ಪೊಲೀಸರು ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿ ಎಲ್ಲ ದಾಖಲಾತಿಗಳನ್ನು ತಯಾರಿಸಿ ಅದರ ಮೇಲೆ ನನ್ನ ಮತ್ತು ಚೆನ್ನಪ್ಪ ಇಬ್ಬರ ಸಹಿ ಪಡೆದಿರುತ್ತಾರೆ ಅಂದರೆ ಸರಿಯಲ್ಲ. ಆದರೆ ಪೊಲೀಸರು ನನ್ನ ಸಹಿಯನ್ನು ಘಟನಾ ಸ್ಥಳದಲ್ಲಿ ಪಡೆದಿರುತ್ತಾರೆ. ಪೊಲೀಸರು ಘಟನಾ ಸ್ಥಳದಲ್ಲಿ ಪಂಚನಾಮೆ ಬರೆದಾಗ ಅದರಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿಲ್ಲ ಅಂದರೆ ಸರಿಯಲ್ಲ. ಏಕೆಂದರೆ ಪೊಲೀಸರು ಘಟನಾ ಸ್ಥಳ ಪಂಚನಾಮೆ ಓದಿ ಹೇಳಿದ ನಂತರ ನನ್ನ ಸಹಿ ಮಾಡಿರುತ್ತೇನೆ. ಘಟನಾ ಸ್ಥಳದ ಚೆಕ್ಕಬಂದಿಯನ್ನು ನಾನು ಹೇಳಬಲ್ಲೆ. ಘಟನಾ ಸ್ಥಳದ ಪೂರ್ವ ದಿಕ್ಕಿಗೆ ಹಾವೇರಿ ತಹಶೀಲ್ದಾರ ಕಛೇರಿಯ ಗೇಟ್ ಇರುತ್ತದೆ. ಪಶ್ಚಿಮ ದಿಕ್ಕಿಗೆ ಉಪತಹಶೀಲ್ದಾರ ಇವರ ಕಛೇರಿ ಇರುತ್ತದೆ. ಉತ್ತರ ದಿಕ್ಕಿಗೆ ಒಂದು ಕೋರ್ಟಿನ ಹಾಲ್ ಇರುತ್ತದೆ, ಆದರೆ ಆ ಕೋರ್ಟಿನ ಹಾಲ್ ಯಾರಿಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಕ್ಷಿಣ ದಿಕ್ಕಿಗೆ ಘಟನಾ ಸ್ಥಳದ ಪಕ್ಕದಲ್ಲಿ ಒಂದು ಗೋಡೆ ಇದ್ದು, ಅದರ ಪಕ್ಕದಲ್ಲಿ ಒಂದು ಹಾಲ್ ಇರುತ್ತದೆ, ಆ ಹಾಲ್ ಯಾರಿಗೆ ಸಂಬಂಧಪಟ್ಟಿದೆ ಎಂದು ನನಗೆ ಗೊತ್ತಿಲ್ಲ.

**4)** ನಾನು ಹಲವಾರು ಕ್ರಿಮಿನಲ್ ಪ್ರಕರಣಗಳಲ್ಲಿ ಸಾಕ್ಷಿದಾರನಾಗಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಅಂದರೆ ಸರಿ. ಚಾ.ಸಾ-1 ಶಿವಲಿಂಗಪ್ಪ ಮತ್ತು ನಾನು ಒಬ್ಬರಿಗೊಬ್ಬರು ಚೆನ್ನಾಗಿ ಒಡನಾಟದಲ್ಲಿ ಇರುತ್ತೇವೆ. ನನ್ನ ಸಮಕ್ಷಮ ಯಾವುದೇ ಘಟನಾ ಸ್ಥಳದ ಪಂಚನಾಮೆ ಮಾಡದೇ ಇದ್ದರೂ ಸಹ ನಾನು ಚಾ.ಸಾ-1 ಶಿವಲಿಂಗಪ್ಪ ಈತನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ರೀತಿ ಪಂಚನಾಮೆ ಮಾಡಿಲ್ಲ ಮತ್ತು ಕಚ್ಚಾ ನಕಾಶೆಯನ್ನು ಸಹ ತಯಾರಿಸಿಲ್ಲ, ಅಲ್ಲದೇ ನಿ.ಪಿ-4 ರಂತೆ ಫೋಟೋ ತೆಗೆದಿಲ್ಲ ಅಂದರೆ ಸರಿಯಲ್ಲ. ಪೊಲೀಸರು ನನಗೆ ಘಟನೆಯ ಬಗ್ಗೆ ನೋಟಿಸನ್ನು 2023 ಈಸ್ವಿಯಲ್ಲಿ ಕೊಟ್ಟಿರುತ್ತಾರೆ. ನನ್ನ ಸಮಕ್ಷಮ ಯಾವುದೇ ರೀತಿ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ಪೊಲೀಸರು ಮಾಡದೇ ಇದ್ದರೂ ಸಹ ನಾನು ಚಾ.ಸಾ-1 ಶಿವಲಿಂಗಪ್ಪ ಈತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಾ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.